ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

# ಬಹುವರ್ಗ ಬೋಧನೆ

## ಸಂಚಿಕೆ – 3

## ಭಾಗ – 3

## ನಾಲ್ಕು ಮತ್ತು ಐದನೇ ತರಗತಿ

## ಪ್ರಥಮ ತ್ರೈಮಾಸಿಕ ಅವಧಿಗೆ

ಡಿ.ಎಸ್.ಇ.ಆರ್.ಟಿ. ಬೆಂಗಳೂರು–85

# ಮುನ್ನುಡಿ

**ಪ್ರಾ**ಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ಹೆಚ್ಚು ಶಾಲೆಗಳನ್ನು ಪ್ರತಿ ಗ್ರಾಮಗಳಲ್ಲಿ ಪ್ರಾರಂಭಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಶಾಲೆಗಳಲ್ಲಿ ಬಹುವರ್ಗ ಬೋಧನೆ ಅನಿವಾರ್ಯ. ರಾಜ್ಯದ ಹೆಚ್ಚಿನ ಶಾಲೆಗಳಲ್ಲಿ ತರಗತಿಗೊಬ್ಬ ಶಿಕ್ಷಕರನ್ನು ನೇಮಿಸಲು ಹಲವಾರು ಕಾರಣಗಳಿಂದ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಒಬ್ಬರೇ ಶಿಕ್ಷಕರು ಒಂದಕ್ಕಿಂತ ಹೆಚ್ಚು ತರಗತಿಗಳನ್ನು ಒಂದೇ ಅವಧಿಯಲ್ಲಿ ನಿರ್ವಹಿಸುವುದು ಅನಿವಾರ್ಯವಾಗಿದೆ. ಹೀಗೆ ತರಗತಿಗಳನ್ನು ನಿರ್ವಹಿಸುವಾಗ ಸಮಯ ವ್ಯರ್ಥವಾಗದಂತೆ ಬೇರೆ ಬೇರೆ ತರಗತಿಗಳ ವಿವಿಧ ವಯೋಮಾನದ ಬೇರೆ ಬೇರೆ ಕಲಿಕಾ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳನ್ನು ಕಲಿಕಾ ಅಭ್ಯಾಸಗಳಲ್ಲಿ ಸದಾ ನಿರತರಾಗುವಂತೆ ಮಾಡುವುದು ಒಂದು ಸವಾಲಾಗಿದೆ. ಈ ಸವಾಲಿಗೆ ಶಾಶ್ವತ ಪರಿಹಾರ ನೀಡುವಲ್ಲಿ ರಾಜ್ಯ ಹಾಗೂ ರಾಷ್ಟ್ರಗಳಲ್ಲಿ ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಸಾಧನೆ ಶ್ಲಾಘನೀಯವಾಗಿದೆ. ಈ ಹಿಂದೆ ನೀಡಲಾದ ಚೈತನ್ಯ-1, ಬಹುಮುಖಿ-1 ತರಬೇತಿಗಳಲ್ಲಿ ಬಹುವರ್ಗ ಬೋಧನೆ ಬಗ್ಗೆ ಮಾಹಿತಿ ನೀಡಲಾಗಿದೆ. ಬಹುವರ್ಗ ಬೋಧನೆಯಲ್ಲಿ ತೊಡಗಿರುವ ಶಿಕ್ಷಕರಿಗೆ ಇನ್ನೂ ಹೆಚ್ಚು ನೆರವಾಗಲೆಂಬ ಉದ್ದೇಶದಿಂದ ಸವಿವರವಾದ ಕೈಪಿಡಿಯನ್ನು ರಚಿಸಲಾಗಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಸಾಮರ್ಥ್ಯಗಳ ಕಲಿಕೆಗೆ ಪೂರಕವಾದ ಕಲಿಕಾ ಸಾಮಗ್ರಿಗಳಾದ ಹಾಡು, ಕಥೆ ಹಾಗೂ ಚಟುವಟಿಕೆಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ತರಗತಿ ಕೋಣೆಗಳಲ್ಲಿ ಅನುಷ್ಠಾನಗೊಳಿಸಿದರೆ ವಿವಿಧ ಸ್ತರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖಾಧಿಕಾರಿಗಳ, ಶಿಕ್ಷಣ ತಜ್ಞರ ಹಾಗೂ ಸಂಪನ್ಮೂಲ ಶಿಕ್ಷಕರ ಶ್ರಮ ಸಾರ್ಥಕವಾಗುತ್ತದೆ.

ಈ ಕೈಪಿಡಿಯು ಒಬ್ಬ ಸಾಮಾನ್ಯ ಶಿಕ್ಷಕನನ್ನು ಆಧಾರವಾಗಿಟ್ಟುಕೊಂಡು ರಚಿಸಲ್ಪಟ್ಟಿದ್ದು ಇದೇ ಕೊನೆಯೆಂದು ನಾವು ಭಾವಿಸಿಲ್ಲ. ತಾವು ಬೋಧಿಸುವಾಗ ಅಲ್ಪಸ್ವಲ್ಪ ಬದಲಾವಣೆಗೆ ಅವಕಾಶ ಇದೆ. ನಿಮ್ಮ ಸಲಹೆ ಸೂಚನೆಗಳು ಎಂದಿನಂತೆ ತಲುಪುತ್ತವೆ ಎಂಬ ನಂಬಿಕೆ ನಮ್ಮದು.

**ಶುಭ ಹಾರೈಕೆಯೊಂದಿಗೆ**



ಸ್ಥಳ : ಬೆಂಗಳೂರು
ದಿನಾಂಕ : ಜೂನ್ 2006

**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ.
ಬೆಂಗಳೂರು.

# ಪರಿಕಲ್ಪನೆ - ಮಾರ್ಗದರ್ಶನ

**ಶ್ರೀ ತ.ಮ. ವಿಜಯ ಭಾಸ್ಕರ್,** ಪ್ರಧಾನ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ,
ಕರ್ನಾಟಕ ಸರ್ಕಾರ

**ಶ್ರೀ ಡಿ. ಜಗನ್ನಾಥರಾವ್**
ನಿವೃತ್ತ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

**ಶ್ರೀ ಚಿದ್ರೆ ಶಂಕ್ರಯ್ಯ ಸ್ವಾಮಿ**
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

**ಶ್ರೀಮತಿ ಪಿ. ಶಾರದಮ್ಮ**
ನಿವೃತ್ತ ಸಹ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

## ಸಾಹಿತ್ಯ ರಚನಾ ಸಂಪನ್ಮೂಲ ತಂಡ

01 **ಶ್ರೀಮತಿ ಜಯಶ್ರೀ ಫ. ರಂಗರೇಜ**
ಉಪನ್ಯಾಸಕರು,
ಡಯಟ್ ಇಳಕಲ್, ಬಾಗಲಕೋಟೆ ಜಿಲ್ಲೆ.

02 **ಶ್ರೀ ಬಿ.ಕೆ. ಹುಚ್ಚೇಗೌಡ**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಕ್ಷೇತ್ರ ಸಂಪನ್ಮೂಲ ಕೇಂದ್ರ ಕುಣಿಗಲ್, ತುಮಕೂರು ಜಿಲ್ಲೆ.

03 **ಶ್ರೀ ಎಂ. ತಿಮ್ಮರಾಯಿ ಗೌಡ**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಕ್ಷೇತ್ರ ಸಂಪನ್ಮೂಲ ಕೇಂದ್ರ ನಾಗಮಂಗಲ, ಮಂಡ್ಯ ಜಿಲ್ಲೆ.

04 **ಕು॥ ಜಿ.ಹೆಚ್. ರಶ್ಮಿ**
ಸಹ ಶಿಕ್ಷಕರು
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಚೀಲೂರು, ಹೊನ್ನಾಳಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

05 **ಶ್ರೀ ಇಬ್ರಾಹಿಂ ಹೆಚ್. ಎಣ್ಣೇರ್** ಸ॥ ಶಿ॥
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಮಾದನ ಬಾವಿ, ಹೊನ್ನಾಳಿ ತಾಲ್ಲೂಕು
ದಾವಣಗೆರೆ ಜಿಲ್ಲೆ.

06 **ಶ್ರೀ ಮಹೇಶ್ವರಪ್ಪ,**
ಸಹ ಶಿಕ್ಷಕರು
ದೊಡ್ಡತ್ತಿನ ಹಳ್ಳಿ, ಹೊನ್ನಾಳಿ ತಾಲ್ಲೂಕು
ದಾವರಣಗೆರೆ ಜಿಲ್ಲೆ.

07 **ಶ್ರೀ ರಾಮಚಂದ್ರಯ್ಯ ಟಿ.ಎಸ್.** ಸ॥ ಶಿ॥
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಚಿಕ್ಕಮಾವತ್ತೂರು, ಕುಣಿಗಲ್ ತಾ॥
ತುಮಕೂರು ಜಿಲ್ಲೆ.

08 **ಶ್ರೀ ನಾರಾಯಣಪ್ಪ ಕೆ.ಎಸ್.** ಸ॥ ಶಿ॥
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಬಸವನಗುಡಿ ಪಾಳ್ಯ, ಮಾಗಡಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

09 **ಶ್ರೀ ಆರ್. ಹೊನ್ನಾಚಾರ್**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಕ್ಷೇತ್ರ ಸಂಪನ್ಮೂಲ ಕೇಂದ್ರ ದೇವನಹಳ್ಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ.

10 **ಶ್ರೀ ಕೆ. ಕಾಂತರಾಜು**
ಸಮೂಹ ಸಂಪನ್ಮೂಲ ವ್ಯಕ್ತಿ
ಸಮೂಹ ಸಂಪನ್ಮೂಲ ಕೇಂದ್ರ
ದೇವನಹಳ್ಳಿ ತಾ॥ ಬೆಂ.ಗ್ರಾ.ಜಿಲ್ಲೆ.

11 **ಶ್ರೀ ಜಿ. ಹರೀಶ್**
ಸಹ ಶಿಕ್ಷಕರು
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಪೂಜಮ್ಮನ ಪಾಳ್ಯ, ದೇವನ ಹಳ್ಳಿ ತಾ॥
ಬೆಂಗಳೂರು ಗ್ರಾಮಾಂತರ ಜಿಲ್ಲೆ.

12 **ಶ್ರೀ ಆರ್. ನಾರಾಯಣ ಸ್ವಾಮಿ** ಸ॥ ಶಿ॥
ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ
ಬಾಶೆಟ್ಟಿಹಳ್ಳಿ, ದೊಡ್ಡಬಳ್ಳಾಪುರ ತಾ॥
ಬೆಂಗಳೂರು ಗ್ರಾಮಾಂತರ ಜಿಲ್ಲೆ

13 **ಶ್ರೀಮತಿ ಮಂಗಳ**
ಸಹ ಶಿಕ್ಷಕರು
ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆ
ಸುಗಟೂರು ಕೋಲಾರ ತಾಲ್ಲೂಕು
ಕೋಲಾರ ಜಿಲ್ಲೆ.

## ಕಾರ್ಯಕ್ರಮ ಆಯೋಜನೆ - ನಿರ್ವಹಣೆ

**ಶ್ರೀಮತಿ ಆರ್. ಮಂಜುಳ**
ಹಿರಿಯ ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು.

**ಶ್ರೀಮತಿ ಬಿ.ವಿ. ಹೇಮಲತ**
ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು.

# ಪ್ರಸ್ತಾವನೆ

*ಪ್ರಿಯ ಶಿಕ್ಷಕ ಬಂಧುಗಳೇ....................*

ಬಹುವರ್ಗ ಬೋಧನೆಗೆ ಸಂಬಂಧಿಸಿದಂತೆ ಈ ಹಿಂದೆ ತಾವು ಬಹುಮುಖಿ–1 ತರಬೇತಿಯನ್ನು ಪಡೆದಿದ್ದೀರಿ. ಅದು ಬಹುವರ್ಗ ಬೋಧನೆಯ ಶಿಕ್ಷಕರಿಗಾಗಿ ಸಿದ್ಧಪಡಿಸಿದ ಮೊದಲ ಸಂಚಿಕೆ. ಬಹುವರ್ಗ ಬೋಧನೆಯಲ್ಲಿ ಶಿಕ್ಷಕರು ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರವನ್ನು ನೀಡುವಲ್ಲಿ ಬಹುಮುಖಿ–1 ಸಫಲವಾಗಿದೆ. ಆದಾಗ್ಯೂ ಬಹುವರ್ಗ ಬೋಧನೆಯಲ್ಲಿ ತೊಡಗಿರುವ ಶಿಕ್ಷಕರಿಗೆ ಇನ್ನಷ್ಟು ನೆರವಾಗುವ ಹಾಗೂ ಕಲಿಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಉದ್ದೇಶದಿಂದ ಒಂದು ತ್ರೈಮಾಸಿಕ ಅವಧಿಯಲ್ಲಿ ತರಗತಿವಾರು, ವಿಷಯವಾರು ಆಯೋಜಿಸಿಕೊಳ್ಳಬೇಕಾದ ಶಾಲಾ ಚಟುವಟಿಕೆಗಳ ಕುರಿತು ಸಮಗ್ರ ವಿವರಗಳನ್ನೊಳಗೊಂಡ "ಬಹುಮುಖಿ–2"ರ ಮಾಲಿಕೆಯ ಸಂಚಿಕೆಗಳನ್ನು ಹೊರತರಲಾಗಿದೆ.

ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಸಂಚಿಕೆಗಳನ್ನು ಸಿದ್ಧಪಡಿಸಲಾಗಿದೆ.

- ಒಂದರಿಂದ ಐದನೇ ತರಗತಿಗಳಿಗೆ ಲಭ್ಯವಿರುವ ಶಿಕ್ಷಕರ ಸಂಖ್ಯೆ.
- ಕಲಿಕೆಯನ್ನು ಪರಿಣಾಮಕಾರಿಗೊಳಿಸಲು ಪೂರಕವಾಗುವಂತೆ ತರಗತಿಗಳ ಸಂಯೋಜನೆ ಮತ್ತು ಹೊಂದಾಣಿಕೆ.
- ಒಂದನೇ ತ್ರೈಮಾಸಿಕ ಅವಧಿಗೆ ಲಭ್ಯವಿರುವ ಅಂದಾಜು ಕೆಲಸದ ದಿನಗಳು.
- ಪ್ರತಿ ತರಗತಿವಾರು / ವಿಷಯವಾರು / ಭಾಗ – ಎ ಮತ್ತು ಭಾಗ – ಬಿ ಗಳಿಗೆ ಸಂಬಂಧಿಸಿದಂತೆ ಮೊದಲ ತ್ರೈಮಾಸಿಕ ಅವಧಿಗೆ ನಿಗದಿಪಡಿಸಿರುವ ಪಠ್ಯವಸ್ತು / ಪಾಠಗಳು.
- ಪಠ್ಯವಸ್ತುವನ್ನು ಪೂರೈಸಲು ತರಗತಿವಾರು, ವಿಷಯವಾರು ನಿಗದಿಪಡಿಸಲಾದ ಅವಧಿಗಳು.
- ಪ್ರತಿ ವಿಷಯದಲ್ಲಿ ಪಾಠವಾರು ಕಲಿಕಾಂಶಗಳು / ಸಾಮರ್ಥ್ಯಗಳು ಮತ್ತು ಕ್ಲಿಷ್ಟತೆಯ ಮಟ್ಟವನ್ನಾಧರಿಸಿ ಬಳಸಿಕೊಳ್ಳಬಹುದಾದ ನೇರ ಬೋಧನಾ ಅವಧಿಗಳು ಹಾಗೂ ಸ್ವಕಲಿಕೆಯ ಅವಧಿಗಳು.
- ಭಾಗ – ಬಿ ಯಲ್ಲಿನ ವಿಷಯಗಳಾದ ಜೀವನ ವಿಜ್ಞಾನ, ಸಾ.ಉ.ಉ.ಕಾ/ಲಲಿತಕಲೆ ಮೌಲ್ಯ ಶಿಕ್ಷಣ, ಮುಂತಾದ ಅಂಶಗಳಿಗೆ ನೀಡಬೇಕಾದ ಸೂಕ್ತ ಪ್ರಾತಿನಿಧ್ಯ.
- ಕೇಳಿ – ಕಲಿ, ಚುಕ್ಕಿ ಚಿನ್ನ, ಚಿಣ್ಣರ ಚುಕ್ಕಿ ಮೊದಲಾದ ರೇಡಿಯೋ ಕಾರ್ಯಕ್ರಮಗಳಿಗೆ ತರಗತಿವಾರು ಅವಧಿಗಳ ಹಂಚಿಕೆ.
- ಸಾಮರ್ಥ್ಯಗಳ ಹೊಂದಾಣಿಕೆಯ ಸಾಧ್ಯಾಸಾಧ್ಯತೆ.
- ಸಂಚಿಕೆ 1ರಲ್ಲಿ ಒಬ್ಬ ಶಿಕ್ಷಕ 1 ರಿಂದ 5 ತರಗತಿಗಳನ್ನೂ, ಸಂಚಿಕೆ – 2ರಲ್ಲಿ ಇಬ್ಬರು ಶಿಕ್ಷಕರು 5 ತರಗತಿಗಳನ್ನೂ, 3ರಲ್ಲಿ ಮೂರು ಜನ ಶಿಕ್ಷಕರು 5ತರಗತಿಗಳನ್ನೂ ಹಾಗೂ ಸಂಚಿಕೆ – 4ರಲ್ಲಿ ನಾಲ್ಕು ಜನ ಶಿಕ್ಷಕರು 5 ತರಗತಿಗಳನ್ನೂ ಪರಿಣಾಮಕಾರಿಯಾಗಿ ನಿರ್ವಹಿಸುವ ಬಗ್ಗೆ ಕಾರ್ಯಸೂಚಿಯನ್ನು ನೀಡಲಾಗಿದೆ.
- 'ಸೌರಭ' – ಸಾಹಿತ್ಯದಲ್ಲಿ ನೀಡಿರುವ ಮಾಹಿತಿಯನ್ನಾಧರಿಸಿ ತರಗತಿವಾರು ವೇಳಾಪಟ್ಟಿಯನ್ನು ರೂಪಿಸಲಾಗಿದೆ.

# ಪ್ರವೇಶಕ್ಕೆ ಮುನ್ನ...........

## ಈ ಸಂಚಿಕೆಯ ಭಾಗ – 3ನ್ನು ಕುರಿತು

- ಈ ಸಂಚಿಕೆಯಲ್ಲಿ 4ನೇ ತರಗತಿಯ ಎಲ್ಲಾ ವಿಷಯಗಳು, 5ನೇ ತರಗತಿಯ ಆಂಗ್ಲಭಾಷೆ, ಸಮಾಜ ವಿಜ್ಞಾನ, ಸಾಮಾನ್ಯ ವಿಜ್ಞಾನ ಭಾಗ – ಬಿ ಗೆ ಸಂಬಂಧಿಸಿದ ಜೀವನ ವಿಜ್ಞಾನ ಮೌಲ್ಯ ಶಿಕ್ಷಣ, ಸಾ.ಉ.ಉ.ಕಾ / ಲಲಿತಕಲೆ ವಿಷಯಗಳನ್ನು ಚೈತನ್ಯ ಮಾದರಿಯ ಚಟುವಟಿಕೆಯಂತೆ ಲಭ್ಯವಿರುವ ಅವಧಿಗಳಿಗೆ ಅನುಗುಣವಾಗಿ ರೂಪಿಸಿದೆ.
- ಭಾಗ – ಬಿ ಯಲ್ಲಿನ ವಿಷಯಗಳಲ್ಲಿ ಕೆಲವು ಅವಧಿಗಳು ಎರಡು ತರಗತಿಗಳಿಗೆ ಹೊಂದಾಣಿಕೆಯಾಗಿದೆ.
- 4ನೇ ತರಗತಿಯ ಭಾಷಾ ವಿಷಯದಲ್ಲಿ 80 ನಿಮಿಷಗಳ ಒಟ್ಟು 67 ಅವಧಿಗಳು ಲಭ್ಯವಿದ್ದು ಎಂಟು ಪಾಠಗಳಿಗೆ ನೇರಬೋಧನೆಗೆ ಅವಕಾಶ ನೀಡಿದೆ.
- 4ನೇ ತರಗತಿಯ ಗಣಿತ ವಿಷಯದಲ್ಲಿ 80 ನಿಮಿಷಗಳ ಒಟ್ಟು 34 ಅವಧಿಗಳು ಲಭ್ಯವಿದ್ದು 21 ಅವಧಿ ನೇರಬೋಧನೆಗೆ 13 ಅವಧಿ ಸ್ವ ಕಲಿಕೆಗೆ ಅವಕಾಶ ನೀಡಿದೆ.
- 4ನೇ ತರಗತಿಯ ಪರಿಸರ ಅಧ್ಯಯನದಲ್ಲಿ 80 ನಿಮಿಷಗಳ ಒಟ್ಟು 55 ಅವಧಿಗಳು ಲಭ್ಯವಿದ್ದು, 32 ಅವಧಿ ನೇರಬೋಧನೆಗೆ 23 ಅವಧಿ ಸ್ವಕಲಿಕೆಗೆ ಅವಕಾಶ ನೀಡಿದೆ.
- ಕೇಳಿ–ಕಲಿ, ಮಕ್ಕಳ ಸ್ವ–ಕಲಿಕೆಯ ಅವಧಿಗಳಲ್ಲಿ ಶಿಕ್ಷಕರು ಪರಿಣಾಮಕಾರಿ ಸೂಚನೆ ಮತ್ತು ಮೇಲ್ವಿಚಾರಣೆಯನ್ನು ಶಾಲಾ ಪರಿಸ್ಥಿತಿಗೆ ಅನುಗುಣವಾಗಿ ರೂಪಿಸಿಕೊಳ್ಳಲು ಅವಕಾಶವಿದೆ.
- 5ನೇ ತರಗತಿಯ ಆಂಗ್ಲಭಾಷೆಯಲ್ಲಿ 40 ನಿಮಿಷಗಳ 45 ಅವಧಿಗಳು ಲಭ್ಯವಿದ್ದು, 22 ಅವಧಿಗಳು ನೇರ ಬೋಧನೆಗೆ 23 ಸ್ವಕಲಿಕೆಗೆ ಅವಕಾಶವಿದ್ದು ಒಂದನೇ ಪಾಠ 'LOOK AND SAY' ಜೂನ್ ತಿಂಗಳಲ್ಲಿ ಬೋಧಿಸುವುದು.
- 5ನೇ ತರಗತಿಗೆ ಘಟಕ ಪರೀಕ್ಷೆ ಮತ್ತು ಪರಿಹಾರ ಬೋಧನೆಗೆ ಅವಧಿಗಳನ್ನು ಹೊಂದಾಣಿಕೆ ಮಾಡಿಕೊಳ್ಳುವುದು.
- 5ನೇ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ 67 ಅವಧಿಗಳು ಲಭ್ಯವಿದ್ದು 37 ಅವಧಿ ನೇರ ಬೋಧನೆಗೆ 30 ಅವಧಿ ಸ್ವಕಲಿಕೆಗೆ ಹಾಗೂ ಸಾಮಾನ್ಯ ವಿಜ್ಞಾನದಲ್ಲಿ 67 ಅವಧಿಗಳು ಲಭ್ಯವಿದ್ದು, 41 ಅವಧಿ ನೇರ ಬೋಧನೆಗೆ 26 ಅವಧಿ ಸ್ವ ಕಲಿಕೆಗೆ ಅವಕಾಶವಿದೆ.
- ಶಿಕ್ಷಕರು ಪರಿಣಾಮಕಾರಿ ಕಲಿಕೆಗೆ ಕಥೆ, ಕವನ, ನಾಟಕ, ಶಿಶುಗೀತೆ, ಕಲಿಕಾ–ಸಾಮಗ್ರಿಗಳೊಂದಿಗೆ ಈ ಹಿಂದೆ ಪಡೆದ ತರಬೇತಿಗಳ ಜ್ಞಾನವನ್ನು ತರಗತಿ ಕೋಣೆಯಲ್ಲಿ ಅಳವಡಿಸಿಕೊಳ್ಳಲು ಮುಕ್ತ ಅವಕಾಶವಿದ್ದು. ಈ ಸಂಚಿಕೆಯಲ್ಲಿ ಚಟುವಟಿಕೆಗಳನ್ನು ಕೇವಲ ಸೂಚ್ಯವಾಗಿ ಅಳವಡಿಸಿದೆ.
- ಮುಂದಿನ ಶೈಕ್ಷಣಿಕ ವರ್ಷದಲ್ಲಿ ರೇಡಿಯೋ ಪಾಠ ನೀಡಿದಲ್ಲಿ ವೇಳಾಪಟ್ಟಿಯಲ್ಲಿ ಅಗತ್ಯ ಬದಲಾವಣೆ ಮಾಡಿಕೊಳ್ಳುವುದು. ಹಾಗಾದಲ್ಲಿ ಭಾಷೆಯ ವಿಷಯಕ್ಕೆ ನೀಡಲಾದ ಅವಧಿಗಳಲ್ಲಿ ಒಂದು ಅವಧಿಯನ್ನು ಕಡಿತ ಮಾಡಿಕೊಳ್ಳುವುದು. 'ಕೇಳಿ–ಕಲಿ, ಚಿನ್ನರ ಚುಕ್ಕಿ, ಚುಕ್ಕಿ–ಚಿನ್ನ' ಮೊದಲಾದ ರೇಡಿಯೋ ಪಾಠ ಕೈಪಿಡಿಗಳಲ್ಲಿ ನೀಡಲಾದ ಪ್ರಸಾರಪೂರ್ವ, ಪ್ರಸಾರೋತ್ತರ ಇತ್ಯಾದಿ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು.

This page Positive not required

# ವಿಷಯವಾರು ನೇರ ಬೋಧನೆ ಹಾಗೂ ಸ್ವಕಲಿಕಾ ಅವಧಿ ಹಂಚಿಕೆ

| ಕ್ರ.ಸಂ. | ವಿಷಯ | ಪಾಠದ ಸಂಖ್ಯೆ | 4ನೇ ತರಗತಿ | | | |
|---|---|---|---|---|---|---|
| | | | ಪಾಠದ ಹೆಸರು | ಒಟ್ಟು ಅವಧಿ | ನೇ|| ಭೋ|| | ಸ್ವ|| ಕ|| |
| 1. | ಕನ್ನಡ | 01 | ನಮ್ಮ ಕನ್ನಡ ನಾಡು | 6 | 6 | – |
| | | 02 | ಪಕ್ಷಿ ಪ್ರೇಮಿ ಸಲೀಂ ಆಲಿ | 9 | 9 | – |
| | | 03 | ಏಕಲವ್ಯ | 9 | 9 | – |
| | | 04 | ಅಜ್ಜಿಯ ಜಂಭ | 8 | 8 | – |
| | | 05 | ಸಂತಮ್ಮಣ್ಣ | 7 | 7 | – |
| | | 06 | ಮಳೆ ಬಂತು ಮಳೆ | 9 | 9 | – |
| | | 07 | ಪುಟಾಣಿಗಳು ಮತ್ತು ಗಲೀವರ | 9 | 9 | – |
| | | 08 | ಪುಟ್ಟ ಕೌಮುದಿ | 10 | 10 | – |
| 2. | ಗಣಿತ | 01 | ಸಂಖ್ಯಾ ಸೂಚಕಗಳು | 7 | 4 | 3 |
| | | 02 | ದಶಮಾಂಶ | 3 | 2 | 1 |
| | | 03 | ಉದ್ದಳತೆಗಳು | 3 | 2 | 1 |
| | | 04 | ತೂಕದ ಅಳತೆ | 3 | 2 | 1 |
| | | 05 | ಜ್ಯಾಮಿತಿ | 4 | 3 | 1 |
| | | 06 | ಸಂಕಲನ | 3 | $1\frac{1}{2}$ | $1\frac{1}{2}$ |
| | | 07 | ವ್ಯವಕಲನ | 3 | $1\frac{1}{2}$ | $1\frac{1}{2}$ |
| | | 08 | ಗುಣಾಕಾರ | 3 | 2 | 1 |
| | | 09 | ಭಾಗಾಕಾರ | 5 | 3 | 2 |
| 3. | ಪರಿಸರ ಅಧ್ಯಯನ | 01 | ಜೀವ ವೈವಿಧ್ಯ | 5 | $2\frac{1}{2}$ | $2\frac{1}{2}$ |
| | | 02 | ಸಸ್ಯ ಪ್ರಪಂಚ | 6 | 4 | 2 |
| | | 03 | ಪರಿಸರ ವೈವಿಧ್ಯ | 6 | $3\frac{1}{2}$ | $2\frac{1}{2}$ |
| | | 04 | ನಮ್ಮ ದೇಹ | 6 | 3 | 3 |
| | | 05 | ಆಹಾರ ಆರೋಗ್ಯ | 7 | 4 | 3 |
| | | 06 | ವಸ್ತುಗಳ ಗುಣಗಳು | 7 | 4 | 3 |
| | | 07 | ಮಣ್ಣು | 6 | $3\frac{1}{2}$ | $2\frac{1}{2}$ |
| | | 08 | ಶಕ್ತಿ | 6 | 4 | 2 |
| | | 09 | ಗೋಳಖಂಡ ಸಾಗರಗಳು | 6 | $3\frac{1}{2}$ | $2\frac{1}{2}$ |
| 4. | SUPW/ಲಲಿತಕಲೆ | | – | 44 | 29 | 15 |
| 5. | ಜೀವನ ವಿಜ್ಞಾನ | | – | 34 | 34 | – |
| 6. | ಕೇಳಿ ಕಲಿ | | – | 22 | – | 22 |
| 7. | ಮೌ. ಶಿಕ್ಷಣ | | – | $5\frac{1}{2}$ | $5\frac{1}{2}$ | – |

| ವಿಷಯ | ಪಾಠದ ಸಂಖ್ಯೆ | 5ನೇ ತರಗತಿ | | | |
|---|---|---|---|---|---|
| | | ಪಾಠದ ಹೆಸರು | ಒಟ್ಟು ಅವಧಿ | ನೇ|| ಭೋ|| | ಸ್ವ|| ಕ|| |
| ENGLISH | 01 | Know me | 04 | 02 | 02 |
| | 02 | We're helpful | 05 | 03 | 02 |
| | 03 | They're good | 05 | 03 | 02 |
| | 04 | Can you tell me what is this ? | 04 | 2 | 2 |
| | 05 | Do you agree ? | 05 | 02 | 03 |
| | 06 | What is he ? | 04 | 01 | 03 |
| | 07 | Clap your hands | 04 | 02 | 02 |
| | 08 | Sweet home | 06 | 03 | 03 |
| | 09 | Grandpa's glasses | 08 | 04 | 04 |
| ಸಮಾಜ ವಿಜ್ಞಾನ | 01 | ಭಾರತ ದೇಶ ಮತ್ತು ಜನಾಂಗ | 11 | 05 | 06 |
| | 02 | ಪ್ರಾಕ್ತನ ಭಾರತ | 09 | 05 | 04 |
| | 03 | ಸಿಂಧೂ ನಾಗರೀಕತೆ | 10 | 06 | 01 |
| | 04 | ವೇದಗಳ ಕಾಲ | 10 | 05 | 05 |
| | 05 | ಪೌರನೀತಿ ಪ್ರಾಮುಖ್ಯತೆ | 07 | 05 | 07 |
| | 06 | ಸಾರ್ವಜನಿಕ ಆಸ್ತಿ | 07 | 05 | 02 |
| | 07 | ಸೌರವ್ಯೂಹ | 06 | 03 | 03 |
| | 08 | ಅಕ್ಷಾಂಶ–ರೇಖಾಂಶ | 07 | 03 | 04 |
| ವಿಜ್ಞಾನ | 01 | ಶಕ್ತಿ ಹಾಗೂ ಶಕ್ತಿಯ ಮೂಲ | 06 | 05 | 001 |
| | 02 | ಕೆಲಸ | 06 | 03 | 03 |
| | 03 | ಬಲ | 07 | 05 | 02 |
| | 04 | ನಮ್ಮ ಪರಿಸರ | 05 | 03 | 02 |
| | 05 | ಸಜೀವಿಗಳ ಗುಣಲಕ್ಷಣಗಳು | 09 | 05 | 04 |
| | 06 | ಸಸ್ಯ ಮತ್ತು ಪ್ರಾಣಿಗಳಿಗಿರುವ ವ್ಯತ್ಯಾಸ | 07 | 04 | 03 |
| | 07 | ಪೃಥ್ವಿಯ ಭೂಸ್ವರೂಪಗಳು | 07 | 04 | 03 |
| | 08 | ವಿವಿಧ ಸ್ವರೂಪಗಳಲ್ಲಿ ಸಸ್ಯ, ಪ್ರಾಣಿ, ಜನರ ಜೀವನ | 03 | 03 | 03 |
| | 09 | ನೆಲ ಜಲದಲ್ಲಿ ಸಸ್ಯ ಪ್ರಾಣಿ ಜೀವನ | 04 | 02 | 02 |
| | 10 | ಹವಾಗುಣ ಮತ್ತು ವಾಯುಗುಣ | 05 | 03 | 02 |
| | 11 | ಹವಾಗುಣ, ವಾಯುಗಣ ನಿತ್ಯ ಜೀವನದ ಮೇಲೆ ಸವಾಲು | 05 | 04 | 01 |
| | | SUPW/ಲಲಿತ ಕಲೆ | 44 | 36 | 8 |
| | | ಮೌ. ಶಿ. | 11 | 11 | – |